ತುಮಕೂರು ವಿಶ್ವವಿದ್ಯಾನಿಲಯ

# ವಿಶ್ವವಿದ್ಯಾನಿಲಯ ಕಲಾ ಕಾಲೇಜು

(ನ್ಯಾಕ್ ಸಂಸ್ಥೆಯ 'ಎ' ಶ್ರೇಣೀಕೃತ ಕಾಲೇಜು)

TUMKUR UNIVERSITY

# UNIVERSITY COLLEGE OF ARTS

(Re-Accredited by NAAC with : 'A' Grade)



ವಿವರಣ ಪತ್ರ

PROSPECTUS

2020-21




## ಕುಲಪತಿಗಳು

**ಪ್ರೊ. ವೈ ಎಸ್ ಸಿದ್ದೇಗೌಡ**



## ಕುಲಸಚಿವರು

**ಪ್ರೊ. ಗಂಗಾನಾಯ್ಕ್ ಕೆ ಎನ್.**



## ಪ್ರಾಂಶುಪಾಲರು

**ಪ್ರೊ. ರಾಮಚಂದ್ರಪ್ಪ ಕೆ.**

## ಪ್ರಸ್ತಾವನೆ

ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಆಗಿರುವ ವಿಶ್ವವಿದ್ಯಾನಿಲಯ ಕಲಾ ಕಾಲೇಜು ನಾಡಿನ ಇತಿಹಾಸದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಈ ಕಾಲೇಜು, ಪುನರ್ ರಾಷ್ಟ್ರೀಯ ಮೌಲ್ಯೀಕರಣ ಹಾಗೂ ಮಾನ್ಯತಾ ಪರಿಷತ್ತಿನಿಂದ (ನ್ಯಾಕ್) 'ಎ' ಶ್ರೇಣಿಯನ್ನು ಪಡೆದಿದ್ದು, ಕರ್ನಾಟಕದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದಾಗಿದೆ.

1940ರಲ್ಲಿ ಇಂಟರ್‌ಮೀಡಿಯೆಟ್ ಕಾಲೇಜು ರೂಪದಲ್ಲಿ ಪ್ರಾರಂಭಗೊಂಡ ಈ ಸಂಸ್ಥೆ, 1973ರಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ವಿಜ್ಞಾನ ಕಾಲೇಜಿನಿಂದ ವಿಭಜನೆಗೊಂಡು ಸರ್ಕಾರಿ ಕಲಾ ಕಾಲೇಜು ಎಂಬ ಹೆಸರಿನೊಂದಿಗೆ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿತು. 2010ರಲ್ಲಿ ತುಮಕೂರು ವಿ.ವಿ.ಯ ಘಟಕ ಕಾಲೇಜಾಗಿ ಪರಿವರ್ತನೆಗೊಂಡು ವಿಶ್ವವಿದ್ಯಾನಿಲಯ ಕಲಾ ಕಾಲೇಜು ಎಂದು ಮರು ನಾಮಕರಣಗೊಂಡಿದೆ.

ವಿಶ್ವವಿದ್ಯಾನಿಲಯದ ಸಮರ್ಥ ಮಾರ್ಗದರ್ಶನ, ದಕ್ಷ ಆಡಳಿತ, ಗುಣಮಟ್ಟದ ಕಲಿಕೆ, ಎಲ್ಲಾ ವಿಭಾಗಗಳಲ್ಲೂ ಖಾಯಂ ಅಧ್ಯಾಪಕ ವರ್ಗ, ಪ್ರಾಯೋಗಿಕ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ, ಉತ್ತಮ ಶೈಕ್ಷಣಿಕ-ಸಾಂಸ್ಕೃತಿಕ ವಾತಾವರಣ, ಶಿಸ್ತುಬದ್ಧ ಹಾಗೂ ಪ್ರತಿಭಾವಂತ ವಿದ್ಯಾರ್ಥಿವೃಂದ ಇತ್ಯಾದಿಗಳಿಂದ ಕಾಲೇಜು ಕಳೆದ ಹಲವು ದಶಕಗಳಿಂದ ಉನ್ನತ ಶಿಕ್ಷಣದಲ್ಲಿ ತನ್ನದೇ ಆದ ಸ್ಥಾನಮಾನವನ್ನು ಹೊಂದಿದೆ. ಶುದ್ಧ ಕುಡಿಯುವ ನೀರು, ಸುಸಜ್ಜಿತ ಗ್ರಂಥಾಲಯ, ಶೌಚಾಲಯ, ವಿಶಾಲ ಕ್ರೀಡಾಂಗಣ, ಹಸಿರು ಕ್ಯಾಂಪಸ್, ಉತ್ತಮ ಗುಣಮಟ್ಟದ ತರಗತಿ ಕೊಠಡಿಗಳು ಹಾಗೂ ಬೋಧನೋಪಕರಣಗಳು ಕಾಲೇಜಿನ ವೈಶಿಷ್ಟ್ಯಗಳಾಗಿವೆ. ಮೂಲ ಸೌಕರ್ಯಗಳ ಅಭಿವೃದ್ಧಿಯಲ್ಲಿ ಕಾಲೇಜು ಗಮನಾರ್ಹ ಮುನ್ನಡೆ ಸಾಧಿಸಿದೆ. ಪ್ರತಿ ತರಗತಿ ಕೊಠಡಿಗಳಲ್ಲೂ ಸ್ಮಾರ್ಟ್ ಬೋರ್ಡ್, ಎಲ್.ಸಿ.ಡಿ. ಪ್ರೊಜೆಕ್ಟರ್ ಅಳವಡಿಸಲಾಗಿದ್ದು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತುರ್ತು ಸಂದರ್ಭದಲ್ಲಿ ಆನ್‌ಲೈನ್ ತರಗತಿಗಳ ಆಧುನಿಕ ತಂತ್ರಜ್ಞಾನದ ಸಂಪೂರ್ಣ ಸದುಪಯೋಗ ಪಡೆದುಕೊಳ್ಳುವಂತಾಗಿದೆ. ಕಾಲೇಜಿಗೆ 30 ಕೆವಿ ಪವರ್ ಬ್ಯಾಕಪ್ ಸೌಲಭ್ಯ ಕಲ್ಪಿಸಲಾಗಿದ್ದು ಅನಿರ್ಬಂಧಿತ ವಿದ್ಯುತ್ ಸರಬರಾಜು ವ್ಯವಸ್ಥೆಯಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಕೂಡ ಲಭ್ಯವಿದೆ.

ಅತ್ಯುನ್ನತ ಮಟ್ಟದ ಬೋಧನೆಯೊಂದಿಗೆ, ಮಾನವೀಯ ಮೌಲ್ಯಗಳ ವರ್ಧನೆ, ದೇಸೀಯ ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕೆ ಪೂರಕವಾದ ಪಠ್ಯಪೂರಕ ಚಟುವಟಿಕೆಗಳ ಆಯೋಜನೆಯಿಂದ ಕಲಾ ಕಾಲೇಜು ಅತ್ಯಂತ ವಿಶಿಷ್ಟವಾದ ಸ್ಥಾನವನ್ನು ತನ್ನದಾಗಿಸಿಕೊಂಡಿದೆ.

ವಿದ್ಯಾರ್ಥಿಗಳ ಸಮಗ್ರ ವಿಕಸನಕ್ಕೆ ಪೂರಕವಾಗುವಂತಹ ವಿವಿಧ ವೇದಿಕೆಗಳು, ಪಠ್ಯೇತರ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳು ಸದಾ ಕ್ರಿಯಾಶೀಲರಾಗಿರುವಂತೆ ನೋಡಿಕೊಳ್ಳುವ ಹಲವು ಬಗೆಯ ಕಾರ್ಯಕ್ರಮಗಳು, ಕ್ರೀಡಾ ಚಟುವಟಿಕೆಗಳು, ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸಹಿಷ್ಣುತೆ, ಸಹಬಾಳ್ವೆಗಳನ್ನು ಪ್ರೇರೇಪಿಸುವಂತಹ ಅಚ್ಚುಕಟ್ಟಾದ ಸುಂದರ ಪರಿಸರ ವಿಶ್ವವಿದ್ಯಾನಿಲಯ ಕಲಾ ಕಾಲೇಜಿಗೆ ಹೆಚ್ಚಿನ ಮೆರುಗನ್ನು ನೀಡಿವೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಕಲಾ ಕಾಲೇಜಿನ ವಿವಿಧ ವಿಭಾಗಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳು, ಸಮಾವೇಶಗಳು ಹಾಗೂ ಕಾರ್ಯಾಗಾರಗಳನ್ನು ಆಯೋಜಿಸುತ್ತಾ ಬಂದಿವೆ. 'ಕಲಾಸಿರಿ' ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸುತ್ತಾ ವಿದ್ಯಾರ್ಥಿಗಳಲ್ಲಿನ ಸುಪ್ತಪ್ರತಿಭೆಯನ್ನು ಹೊರತರುವ ಪ್ರಯತ್ನದಲ್ಲಿ ನಿರಂತರವಾಗಿ ಕ್ರಿಯಾಶೀಲವಾಗಿದೆ. ಕಲಾಸಿರಿ ಉತ್ಸವದ ಮೂಲಕ ತುಮಕೂರು ಜಿಲ್ಲೆಯ ಅನೇಕ ಸಾಂಸ್ಕೃತಿಕ ಪ್ರತಿಭೆಗಳನ್ನು ಅನಾವರಣಗೊಳಿಸಲು ಸಾಧ್ಯವಾಗಿದೆ.

ಕಾಲೇಜಿನ ಶೈಕ್ಷಣಿಕ ಸಾಧನೆ ಫಲಿತಾಂಶದಲ್ಲಿಯೂ ಬಿಂಬಿತವಾಗಿದೆ. ಪ್ರತಿ ವರ್ಷವೂ ಹಲವಾರು ರ್‍ಯಾಂಕುಗಳು ಕಾಲೇಜಿನ ಮುಡಿಗೇರುತ್ತಿವೆ. 2018-19 ನೇ ಶೈಕ್ಷಣಿಕ ವರ್ಷದಲ್ಲಿ ನಮ್ಮ ಕಾಲೇಜು 09 ರ್‍ಯಾಂಕುಗಳನ್ನು ತನ್ನ

ಮುಡಿಗೇರಿಸಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತಗೊಂಡ ಹಾಗೂ ಘಟಕ ಕಾಲೇಜುಗಳ ಪಂಕ್ತಿಯಲ್ಲಿ ಅಗ್ರಸ್ಥಾನದಲ್ಲಿದೆ. ಅಧ್ಯಾಪಕ ವೃಂದವೂ ಗುಣಾತ್ಮಕ ಪ್ರಗತಿಗೆ ಸತತ ಶ್ರಮಿಸುತ್ತಿದ್ದು ಹಲವಾರು ಅಧ್ಯಾಪಕರು ಸಂಶೋಧನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಕಾಲೇಜು ಕ್ಯಾಂಪಸ್ ಸಂಪೂರ್ಣ ವೈಫೈ ಸೌಲಭ್ಯ ಹೊಂದಿದ್ದು ಮಾಹಿತಿ ತಂತ್ರಜ್ಞಾನದ ಸದ್ಬಳಕೆ ಸಾಧ್ಯವಾಗಿದೆ. ಕಾಲೇಜಿನಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದ್ದು, ವಿದ್ಯಾರ್ಥಿಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ವಿಶೇಷವಾಗಿ ವಿದ್ಯಾರ್ಥಿನಿಯರ ಸುರಕ್ಷತೆಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ.

ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಕ್ರೀಡಾ ರಂಗಗಳಲ್ಲಿ ನಮ್ಮ ಕಾಲೇಜಿನ ಪ್ರತಿಭೆಗಳ ಸಾಧನೆ ಅನನ್ಯ. ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ನಮ್ಮ ವಿದ್ಯಾರ್ಥಿಗಳು ಸಾಂಸ್ಕೃತಿಕ ಹಾಗೂ ಕ್ರೀಡಾ ರಂಗಗಳಲ್ಲಿ ರಾಜ್ಯ-ರಾಷ್ಟ್ರಮಟ್ಟಗಳಲ್ಲಿ ವಿವಿಧ ಬಹುಮಾನಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಎನ್‌ಎಸ್‌ಎಸ್, ಎನ್‌ಸಿಸಿ, ರೆಡ್‌ಕ್ರಾಸ್, ಸ್ಕೌಟ್ಸ್ & ಗೈಡ್ಸ್ ಘಟಕಗಳು ಕಾಲೇಜಿಗೆ ಶೋಭೆ ತಂದಿವೆ. ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿದ್ದಾರೆ. ಹಳೆ ವಿದ್ಯಾರ್ಥಿ ಸಂಘ ಕಾಲೇಜಿನ ಏಳ್ಗೆಯಲ್ಲಿ ತನ್ನದೇ ಪಾತ್ರವಹಿಸಿದೆ.



## ಪ್ರವೇಶ ನಿಯಮಗಳು

ಪ್ರಥಮ ಬಿ.ಎ./ಬಿ.ಎಸ್.ಡಬ್ಲ್ಯು./ಬಿ.ಕಾಂ./ಬಿ.ಬಿ.ಎಂ./ಬಿ.ವಿ.ಎ. ಪ್ರವೇಶ ಬಯಸುವ ಅರ್ಹ ವಿದ್ಯಾರ್ಥಿಗಳು ನಿಗದಿತ ಅರ್ಜಿ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿ ಭರ್ತಿ ಮಾಡಿದ ಅರ್ಜಿಯನ್ನು ನಿಗದಿಪಡಿಸಿದ ದಿನಾಂಕದ ಒಳಗೆ ಸಲ್ಲಿಸಬೇಕು. ತಪ್ಪು ಮಾಹಿತಿಯುಳ್ಳ ಅಥವಾ ಗಡುವು ಮೀರಿದ ಅರ್ಜಿಗಳನ್ನು ಪ್ರವೇಶಕ್ಕಾಗಿ ಪರಿಗಣಿಸಲಾಗುವುದಿಲ್ಲ. ಈ ಕೆಳಕಂಡ ದಾಖಲೆಗಳ **ದೃಢೀಕೃತ ಝೆರಾಕ್ಸ್ ಪ್ರತಿಗಳೊಂದಿಗೆ** ಕಾಲೇಜಿನ ಕಛೇರಿಗೆ ಹಾರ್ಡ್ ಕಾಪಿ ಸಲ್ಲಿಸಬೇಕು.

1. ಅರ್ಹತಾ ಪರೀಕ್ಷೆಯ (ಪಿಯುಸಿ)/ತತ್ಸಮಾನ ಅಂಕಪಟ್ಟಿ
2. ಹಿಂದೆ ವ್ಯಾಸಂಗ ಮಾಡಿದ ಕಾಲೇಜು ನೀಡಿದ ನಡತೆ ಪ್ರಮಾಣ ಪತ್ರ/ವರ್ಗಾವಣೆ ಪತ್ರ (ಟಿ.ಸಿ.) (ನೀಡಿದ್ದ ಪಕ್ಷದಲ್ಲಿ)/
3. ಜನ್ಮ ದಿನಾಂಕ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಪ್ರತಿ.
4. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಅನ್ವಯವಾಗುವವರಿಗೆ).
5. ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 3 ಭಾವಚಿತ್ರಗಳು.
6. ಆಧಾರ್ ಗುರುತಿನ ಚೀಟಿ.
7. ಬ್ಯಾಂಕ್ ಖಾತೆ ಸಂಖ್ಯೆ ವಿವರ ಹೊಂದಿರುವ ಪಾಸ್‌ಪುಸ್ತಕ ಮತ್ತು ಮೊಬೈಲ್ ದೂರವಾಣಿ ಸಂಖ್ಯೆ. (ಯಾವುದೇ ಕಾರಣಕ್ಕೂ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ದೂರವಾಣಿ ಸಂಖ್ಯೆಯನ್ನು ಬದಲಾವಣೆ ಮಾಡಬಾರದು)
8. **ಅರ್ಜಿಯಲ್ಲಿ ತಂದೆ/ಪೋಷಕರ ಸಹಿ ಅತ್ಯವಶ್ಯಕವಾಗಿರುತ್ತದೆ**

ಅಭ್ಯರ್ಥಿಗಳು ಮೇಲ್ಕಂಡ **ಮೂಲ ಪ್ರಮಾಣ ಪತ್ರಗಳನ್ನು ಪ್ರವೇಶ ಸಂದರ್ಭದಲ್ಲಿ** ಹಾಜರುಪಡಿಸಬೇಕು.

ಅರ್ಜಿ ಸ್ವೀಕರಿಸಲು ಸೂಚಿಸಿರುವ ಕೊನೆಯ ದಿನಾಂಕದ ಬಳಿಕ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತುಮಕೂರು ವಿಶ್ವವಿದ್ಯಾನಿಲಯದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಪ್ರವೇಶವನ್ನು ಅರ್ಹತೆ ಹಾಗೂ ಸರ್ಕಾರ ಸೂಚಿಸಿರುವ ಮೀಸಲಾತಿ ನಿಯಮಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ಇತರೆ ಆರ್ಥಿಕ ದುರ್ಬಲ ವರ್ಗದವರಿಗೆ ಶೇ. 5% ಮೀಸಲಾತಿ ಇರುತ್ತದೆ. **ಹೈದ್ರಾಬಾದ್ ಕರ್ನಾಟಕ ಪ್ರದೇಶ** ಮತ್ತು **ವಿಕಲಚೇತನ** ಕೋಟಾದಡಿಯಲ್ಲಿ ಸರ್ಕಾರದ ನಿಯಮಾನುಸಾರ ಮೀಸಲಾತಿ ನೀಡಲಾಗುವುದು. ಮೀಸಲಾತಿ ಬಯಸುವ ವಿದ್ಯಾರ್ಥಿಗಳು ಕಂದಾಯ /ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.

ವ್ಯಾಸಂಗದ ವಿಷಯಗಳ ಪಟ್ಟಿಯನ್ನು ಮುಂದೆ ನೀಡಲಾಗಿದೆ. ಒಮ್ಮೆ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆದ ಬಳಿಕ ಸಂಯೋಜನೆಯ (ಕಾಂಬಿನೇಶನ್) ಬದಲಾವಣೆಗೆ ಅವಕಾಶ ಇರುವುದಿಲ್ಲ. ಪ್ರಮಾಣಪತ್ರಗಳ ಮೂಲ ಪ್ರತಿಗಳ ಪರಿಶೀಲನೆ ಆದ ಬಳಿಕವಷ್ಟೆ ಎಲ್ಲಾ ಆಯ್ಕೆಗಳು ಖಚಿತವಾಗುತ್ತವೆ.

ಹೊರ ರಾಜ್ಯಗಳಿಂದ ಬರುವ ಅಭ್ಯರ್ಥಿಗಳು **ವಲಸೆ (ಮೈಗ್ರೇಶನ್)** ಪ್ರಮಾಣಪತ್ರವನ್ನು ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಪ್ರವೇಶ **ಅರ್ಹತಾ ಪತ್ರವನ್ನು** ಹಾಜರುಪಡಿಸಬೇಕು. ಪ್ರವೇಶದ ಸಂದರ್ಭದಲ್ಲಿ ಅಭ್ಯರ್ಥಿ ತನ್ನ ತಂದೆ ತಾಯಿ/ಪೋಷಕರೊಂದಿಗೆ ಬರುವುದು ಕಡ್ಡಾಯವಾಗಿರುತ್ತದೆ. ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಯು ತುಮಕೂರು ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆಯುವವರೆಗೂ ತಾತ್ಕಾಲಿಕವಾಗಿರುತ್ತವೆ.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

1. ತರಗತಿಯಲ್ಲಿ ಹಾಜರಾತಿ ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಗಳು ಶೇ.75 ಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನರ್ಹರಾಗುತ್ತಾರೆ.
2. ಅಧ್ಯಾಪಕರ ಅಥವಾ ಪ್ರಾಂಶುಪಾಲರ ಪೂರ್ವಾನುಮತಿ ಇಲ್ಲದೆ ತರಗತಿ ಕೊಠಡಿಯಿಂದ ಅನಾವಶ್ಯಕವಾಗಿ ಹೊರಹೋಗುವಂತಿಲ್ಲ.
3. ವಿದ್ಯಾರ್ಥಿಗಳು ಕಾಲೇಜಿನ ವೇಳೆಯಲ್ಲಿ ಶೈಕ್ಷಣಿಕ ಹಾಗೂ ಆಡಳಿತ ವ್ಯವಹಾರಗಳ ಸಂದರ್ಭದಲ್ಲಿ ಹಾಗೂ ಪರೀಕ್ಷಾ ಕೊಠಡಿಯಲ್ಲಿ, ಪ್ರವೇಶಾತಿಯ ಸಂದರ್ಭದಲ್ಲಿ ನೀಡಲಾಗುವ ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಾಗಿದೆ.
4. ವಿದ್ಯಾರ್ಥಿಗಳು ತರಗತಿಗಳು ನಡೆಯುವ ಸಂದರ್ಭದಲ್ಲಿ ಕಾಲೇಜಿನ ಆವರಣದಲ್ಲಿ ಅನಗತ್ಯ ಓಡಾಟ ಮತ್ತು ಮೊಬೈಲ್ ಬಳಸುವುದನ್ನು ನಿರ್ಬಂಧಿಸಲಾಗಿದೆ.
5. ಕಾಲೇಜಿನ ಆವರಣದಲ್ಲಿ ಗುಟ್ಕಾ, ಧೂಮಪಾನ ಮುಂತಾದ ಯಾವುದೇ ದುಶ್ಚಟಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ, ಅಂತಹ ಪ್ರಸಂಗಗಳು ಘಟಿಸಿದ ಪಕ್ಷದಲ್ಲಿ ತಪ್ಪಿತಸ್ಥ ವಿದ್ಯಾರ್ಥಿಗಳ ಪ್ರವೇಶವನ್ನು ರದ್ದುಗೊಳಿಸಲಾಗುವುದು.
6. ಕಾಲೇಜಿನ ಆವರಣ, ಗ್ರಂಥಾಲಯ, ತರಗತಿಗಳು, ಶೌಚಾಲಯಗಳಲ್ಲಿ ಅಶ್ಲೀಲವಾದಂತಹ ಬರವಣಿಗೆಗಳನ್ನು ನಿಷೇಧಿಸಲಾಗಿದೆ. ಇಂತಹ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.
7. ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಶುಚಿತ್ವವನ್ನು ಕಾಪಾಡುವುದಕ್ಕೆ ಬದ್ಧರಾಗಿರಬೇಕು.
8. ಪ್ರಾಂಶುಪಾಲರ ಪೂರ್ವಾನುಮತಿಯಿಲ್ಲದೆ ಯಾವುದೇ ಸಭೆಗಳನ್ನು ಅಥವಾ ಪ್ರವಾಸಗಳನ್ನು ಆಯೋಜಿಸುವಂತಿಲ್ಲ. ಅಂತಹ ಸಂದರ್ಭದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು.
9. ಹೊರಗಿನಿಂದ ವಿದ್ಯಾರ್ಥಿಯನ್ನು ಕಾಣಲು ಯಾರೇ ಬಂದರೂ ಪ್ರಾಂಶುಪಾಲರ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.
10. ಕಾಲೇಜು ಕಾಲಕಾಲಕ್ಕೆ ಹೊರಡಿಸುವ ಪರೀಕ್ಷಾ ವೇಳಾಪಟ್ಟಿ, ಶುಲ್ಕಗಳು ಹಾಗೂ ಉಳಿದ ಪ್ರಕಟಣೆಗಳಿಗಾಗಿ ಕಾಲೇಜಿನ ಪ್ರಕಟಣಾ ಫಲಕದಲ್ಲಿ ತಿಳಿಸುವ/ಸೂಚಿಸುವ ಮಾಹಿತಿಗಳನ್ನು ಪ್ರತಿನಿತ್ಯ ಗಮನಿಸಬೇಕು. ತಪ್ಪಿದಲ್ಲಿ ಆಗುವ ತೊಂದರೆಗಳಿಗೆ ವಿದ್ಯಾರ್ಥಿಗಳೇ ಹೊಣೆಗಾರರಾಗುತ್ತಾರೆ.
11. ನಿಯೋಜಿತ ಕಾರ್ಯಗಳು ಹಾಗೂ ಕಿರು ಪರೀಕ್ಷೆಗಳು ಕಡ್ಡಾಯವಾಗಿರುತ್ತವೆ.
12. ಕಾಲೇಜು ಸಂಘಟಿಸುವ ಪಠ್ಯ ಪೂರಕ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕಾಗುತ್ತದೆ.
13. ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಪಠ್ಯದ ಜೊತೆಗೆ ಮಾತ್ರ ಕೈಗೊಳ್ಳಲು ಅವಕಾಶವಿರುತ್ತದೆ.
14. ಕಾಲೇಜಿನಲ್ಲಿ ಎಲ್ಲರೊಂದಿಗೆ ಸಭ್ಯ ಹಾಗೂ ಸಹನೀಯ ನಡವಳಿಕೆ ಹೊಂದಿರಬೇಕು.
15. ಭಾಷಾ ವಿಷಯದ ಪಠ್ಯಪುಸ್ತಕಗಳನ್ನು ತರಗತಿಗಳಿಗೆ ತರುವುದು ಕಡ್ಡಾಯವಾಗಿರುತ್ತದೆ.
16. ವಿದ್ಯಾರ್ಥಿಗಳು ಯಾವುದೇ ರೀತಿಯ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದು ಕಂಡುಬಂದಲ್ಲಿ ಅಂಥವರ ಪ್ರವೇಶವನ್ನು ರದ್ದುಗೊಳಿಸಲಾಗುವುದು.
17. ಪ್ರಾಂಶುಪಾಲರ ಸಹಿಯ ಅಗತ್ಯವಿರುವ ಯಾವುದೇ ಪ್ರಮಾಣಪತ್ರ, ದಾಖಲೆಗಳನ್ನು ಪರಿಶೀಲನೆಗಾಗಿ ಕಾಲೇಜಿನ ಕಛೇರಿಯಲ್ಲಿ ಸಲ್ಲಿಸುವುದು. ನೇರವಾಗಿ ಪ್ರಾಂಶುಪಾಲರನ್ನು ಸಹಿಗಾಗಿ ಸಂಪರ್ಕಿಸತಕ್ಕದ್ದಲ್ಲ.
18. ವಿದ್ಯಾರ್ಥಿಗಳು ಕಾಲೇಜಿನ ಆಸ್ತಿಯನ್ನು ಸುರಕ್ಷಿತವಾಗಿಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

19. ಕಾಲೇಜಿನಲ್ಲಿ ಅಶಿಸ್ತನ್ನು ಪ್ರದರ್ಶಿಸುವುದು, ಅಶ್ಲೀಲ ಭಾಷೆಯ ಬಳಕೆ, ಅಧ್ಯಾಪಕರೊಂದಿಗೆ ಹಾಗೂ ಸಹ ವಿದ್ಯಾರ್ಥಿಗಳೊಂದಿಗೆ ಅನುಚಿತವಾಗಿ ವರ್ತಿಸಿದಲ್ಲಿ ಅಂತಹ ವಿದ್ಯಾರ್ಥಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

20. ವಿದ್ಯಾರ್ಥಿಗಳು ಎನ್..ಎಸ್.ಎಸ್., ಎನ್.ಸಿ.ಸಿ, ರೆಡ್‌ಕ್ರಾಸ್, ಸ್ಕೌಟ್ಸ್ & ಗೈಡ್ಸ್ ಈ ಯಾವುದಾದರೊಂದು ಘಟಕಗಳಲ್ಲಿ ನೊಂದಣಿ ಮಾಡಿಕೊಳ್ಳಬೇಕಿರುವುದು ಕಡ್ಡಾಯವಾಗಿರುತ್ತದೆ.

## ವ್ಯಾಸಂಗದ ವಿಷಯಗಳು

ಕಾಲೇಜಿನಲ್ಲಿ ಬಿ.ಎ., ಬಿ.ಎಸ್.ಡಬ್ಲ್ಯು., ಬಿ.ಕಾಂ., ಬಿಬಿಎಂ ಹಾಗೂ ಬಿ.ವಿ.ಎ.(ಬ್ಯಾಚಲರ್ ಆಫ್ ವಿಶುವಲ್ ಆರ್ಟ್ಸ್) ಕೋರ್ಸುಗಳು ಲಭ್ಯವಿರುತ್ತವೆ.

ಪ್ರಥಮ ಭಾಷೆ: ಕನ್ನಡ, ಹಿಂದಿ, ಸಂಸ್ಕೃತ, ಉರ್ದು, ದ್ವಿತೀಯ ಭಾಷೆ: **ಇಂಗ್ಲಿಷ್** (ಕಡ್ಡಾಯ)

## ಕಾಲೇಜಿನಲ್ಲಿ ಲಭ್ಯವಿರುವ ಐಚ್ಛಿಕ ವಿಷಯಗಳ ಸಂಯೋಜನೆ

| ಕ್ರ.ಸಂ. | ಕೋರ್ಸ್ | ಸಂಯೋಜನೆ (ಕಾಂಬಿನೇಷನ್) | ವಿಭಾಗ (ಸೆಕ್ಷನ್) | ಪ್ರವೇಶ ಮಿತಿ |
|---|---|---|---|---|
| 1. | ಬಿ.ಎ. | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ (ಎಚ್.ಇ.ಪಿ.) | 02 | 120 |
| 2. | | ಇತಿಹಾಸ, ಅರ್ಥಶಾಸ್ತ್ರ, ಕನ್ನಡ (ಎಚ್.ಇ.ಕೆ.) | 02 | 120 |
| 3. | | ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ (ಎಚ್.ಇ.ಎಸ್.) | 01 | 60 |
| 4. | | ಪತ್ರಿಕೋದ್ಯಮ, ಐಚ್ಛಿಕ ಕನ್ನಡ, ರಾಜ್ಯಶಾಸ್ತ್ರ (ಜೆ.ಕೆ.ಪಿ) | 01 | 60 |
| 5. | | ಐಚ್ಛಿಕ ಇಂಗ್ಲೀಷ್, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ (ಇಎನ್‌ಜಿ,ಎಸ್.ಪಿ) | 02 | 120 |
| 6. | | ಇತಿಹಾಸ, ಪತ್ರಿಕೋದ್ಯಮ, ಐಚ್ಛಿಕ ಇಂಗ್ಲೀಷ್ (ಎಚ್.ಜೆ.ಇಎನ್‌ಜಿ) | 01 | 60 |
| 7. | | ಗ್ರಂಥಾಲಯ & ಮಾಹಿತಿ ವಿಜ್ಞಾನ, ಮನೋವಿಜ್ಞಾನ, ಪತ್ರಿಕೋದ್ಯಮ (ಎಲ್,ಪಿಎಸ್,ಜೆ) | 01 | 60 |
| 8. | | ಇತಿಹಾಸ, ಪತ್ರಿಕೋದ್ಯಮ, ಐಚ್ಛಿಕ ಕನ್ನಡ(ಎಚ್.ಜೆ.ಕೆ.) | 01 | 60 |
| 9. | ಬಿ.ಎಸ್.ಡಬ್ಲ್ಯು. | ನಿಗದಿತ ಪಠ್ಯವಿಷಯಗಳು | 01 | 50 |
| 10. | ಬಿ.ಕಾಂ. | ನಿಗದಿತ ಪಠ್ಯವಿಷಯಗಳು | 05 | 300 |
| 11. | ಬಿ.ಬಿ.ಎಂ. | ನಿಗದಿತ ಪಠ್ಯವಿಷಯಗಳು | 01 | 60 |
| 12. | ಬಿ.ವಿ.ಎ. | ಫೌಂಡೇಶನ್ ಕೋರ್ಸ್(ಪಿ.ಯು.ಸಿ. ನಂತರ- **ಒಂದು** ವರ್ಷ) | 01 | 50 |
| | | ಪೇಂಟಿಂಗ್ (**ಮೂರು** ವರ್ಷ) | 01 | 25 |
| | | ಅಪ್ಲೈಡ್ ಆರ್ಟ್ (**ಮೂರು** ವರ್ಷ) | 01 | 25 |

ಪ್ರತಿ ಕಾಂಬಿನೇಶನ್/ತರಗತಿಗಳಲ್ಲಿ ಕನಿಷ್ಠ **15** ವಿದ್ಯಾರ್ಥಿಗಳು ಪ್ರವೇಶ ಪಡೆದರೆ ಮಾತ್ರ ಆ ಕಾಂಬಿನೇಷನ್‌ಗೆ ಈ ಶೈಕ್ಷಣಿಕ ವರ್ಷಕ್ಕೆ ಅವಕಾಶ ಕಲ್ಪಿಸಲಾಗುವುದು. ಇಲ್ಲವಾದಲ್ಲಿ ಆ ಕಾಂಬಿನೇಶನ್/ತರಗತಿಗಳನ್ನು ಸ್ಥಗಿತಗೊಳಿಸಲಾಗುವುದು.

ವಿದ್ಯಾರ್ಥಿಗಳ ಶೈಕ್ಷಣಿಕ ಅರ್ಹತೆಯ (ಮೆರಿಟ್ ಮತ್ತು ರೋಸ್ಟರ್) ಆಧಾರದ ಮೇಲೆ ಮೇಲ್ಕಾಣಿಸಿದ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುವುದು.

ಒಮ್ಮೆ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆದ ಬಳಿಕ ಸಂಯೋಜನೆಯ (ಕಾಂಬಿನೇಶನ್) ಬದಲಾವಣೆಗೆ ಅವಕಾಶ ಇರುವುದಿಲ್ಲ.

## ಪಾಳಿ ಪದ್ಧತಿ

ಕಾಲೇಜು ಎರಡು ಪಾಳಿಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಬೆಳಗಿನ ಅವಧಿ 8.00ರಿಂದ 12.30 ರವರೆಗೆ ಬಿ.ಕಾಂ/ಬಿ.ಬಿ.ಎಂ ತರಗತಿಗಳು ಹಾಗೂ ಮಧ್ಯಾಹ್ನದ ಅವಧಿ 12.30ರಿಂದ ಸಂಜೆ 5.10ರವರೆಗೆ ಬಿ.ಎ/ಬಿ.ಎಸ್.ಡಬ್ಲ್ಯು. ತರಗತಿಗಳು ನಡೆಯುತ್ತವೆ. ದೃಶ್ಯ/ಲಲಿತಕಲಾ ವಿಭಾಗದ ತರಗತಿಗಳು ಬೆಳಿಗ್ಗೆ 10.00ರಿಂದ ಸಂಜೆ 5.00ರವರೆಗೆ ನಡೆಯುತ್ತವೆ.

## ದ್ವಿತೀಯ ಹಾಗೂ ತೃತೀಯ ಪದವಿ ಪ್ರವೇಶ

2019-20 ಹಾಗೂ 2018-19 ನೇ ಸಾಲಿನಲ್ಲಿ ಇದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಪದವಿ ವಿದ್ಯಾರ್ಥಿಗಳು ಕಾಲೇಜಿನ ಕಛೇರಿಯಿಂದ ದಾಖಲಾತಿ ನವೀಕರಣ ಅರ್ಜಿ ನಮೂನೆಗಳನ್ನು ಪಡೆದು ವಿವರಗಳನ್ನು ಭರ್ತಿ ಮಾಡಿ, ನಿಗದಿತ ಶುಲ್ಕ ಪಾವತಿಸಿ ಮರುಪ್ರವೇಶ ಪಡೆಯಬೇಕು. ಶುಲ್ಕ ರಿಯಾಯಿತಿಯನ್ನು ಬಯಸುವ ವಿದ್ಯಾರ್ಥಿಗಳು ತಮ್ಮ ಪೋಷಕರ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಈ ಹಿಂದಿನ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಪಡೆದ ಪ್ರವೇಶ ಪತ್ರದ ನಕಲನ್ನು ನೀಡಬೇಕು.

## ಶುಲ್ಕದ ವಿವರ

ವಿದ್ಯಾರ್ಥಿಗಳು ಪ್ರವೇಶ ಸಂದರ್ಭದಲ್ಲಿ ಪಾವತಿಸಬೇಕಾದ ಶುಲ್ಕಗಳ ವಿವರವನ್ನು ವೆಬ್ ಸೈಟಿನಲ್ಲಿ/ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ಸರ್ಕಾರದ/ವಿಶ್ವವಿದ್ಯಾನಿಲಯದ ಆದೇಶಗಳನ್ವಯ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಿಗೆ ಪ್ರವೇಶಾತಿ ಪಡೆಯುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷದ ಮಿತಿಯೊಳಗಿದ್ದಲ್ಲಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. 2.00 ಲಕ್ಷದ ಮಿತಿಯೊಳಗಿದ್ದಲ್ಲಿ ಅಂತಹ ಅರ್ಹ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಶುಲ್ಕವನ್ನು ಪ್ರವೇಶ ಪಡೆಯುವ ಸಂದರ್ಭದಲ್ಲಿ ಪಾವತಿಸಬೇಕು. ಸಮಾಜ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಿ, ನಿಗದಿಪಡಿಸಿದ ಎಲ್ಲಾ ಶುಲ್ಕಗಳ ಮೊತ್ತ ಮಂಜೂರಾಗಿ ಹಣ ಬಿಡುಗಡೆಯಾದ ನಂತರ, (ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶುಲ್ಕ ಸೇರಿದಂತೆ) ಆ ವಿದ್ಯಾರ್ಥಿಗಳ ಶುಲ್ಕವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಿಕೊಳ್ಳಲಾಗುವುದು. ವಿಶ್ವವಿದ್ಯಾನಿಲಯ ಮತ್ತು ಕಾಲೇಜಿಗೆ ಸಂದಾಯವಾದ ನಂತರ ಹೆಚ್ಚುವರಿ ಮೊತ್ತವನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲಾಗುವುದು. ವಿದ್ಯಾರ್ಥಿವೇತನ ಮಂಜೂರಾಗದಿದ್ದಲ್ಲಿ ವಿದ್ಯಾರ್ಥಿಗಳು ಉಳಿದ ಎಲ್ಲಾ ಶುಲ್ಕಗಳನ್ನು ಪಾವತಿಸಬೇಕು.

ಸರ್ಕಾರದ/ವಿಶ್ವವಿದ್ಯಾನಿಲಯದ ಆದೇಶಗಳನ್ವಯ ವಿದ್ಯಾರ್ಥಿ/ತಂದೆ/ತಾಯಿ/ಪೋಷಕರು ವಾರ್ಷಿಕ ವರಮಾನ ರೂ. 1.00 ಲಕ್ಷಗಳ ಮಿತಿಯೊಳಗಿರುವ ಎಲ್ಲಾ ಧರ್ಮಗಳ/ ಜಾತಿಗಳ ಹಾಗೂ ಸಮುದಾಯಗಳ ವಿದ್ಯಾರ್ಥಿಗಳು (ಪ.ಜಾ/ಪ.ಪಂ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಮತ್ತು ರೂ.2.50 ಲಕ್ಷಗಳ ಮಿತಿಯೊಳಗಿರುವ ಹಿಂದುಳಿದ ವರ್ಗಗಳ ಪ್ರವರ್ಗ-01 ರ ಅರ್ಹ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಶುಲ್ಕವನ್ನು ಪ್ರವೇಶ ಪಡೆಯುವ ಸಂದರ್ಭದಲ್ಲಿ ಪಾವತಿಸಬೇಕು. ಸಂಬಂಧಿಸಿದ ಇಲಾಖೆಗಳಿಗೆ

ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಿ, ನಿಗದಿಪಡಿಸಿದ ಎಲ್ಲಾ ಶುಲ್ಕಗಳ ಮೊತ್ತ ಮಂಜೂರಾಗಿ ಹಣ ಬಿಡುಗಡೆಯಾದ ನಂತರ, (ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶುಲ್ಕ ಸೇರಿದಂತೆ) ಆ ವಿದ್ಯಾರ್ಥಿಗಳ ಶುಲ್ಕವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಿಕೊಳ್ಳಲಾಗುವುದು. ವಿಶ್ವವಿದ್ಯಾನಿಲಯ ಮತ್ತು ಕಾಲೇಜಿಗೆ ಸಂದಾಯವಾದ ನಂತರ ಹೆಚ್ಚುವರಿ ಮೊತ್ತವನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲಾಗುವುದು. ವಿದ್ಯಾರ್ಥಿವೇತನ ಮಂಜೂರಾಗದಿದ್ದಲ್ಲಿ ವಿದ್ಯಾರ್ಥಿಗಳು ಉಳಿದ ಎಲ್ಲಾ ಶುಲ್ಕಗಳನ್ನು ಪಾವತಿಸಬೇಕು.

ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಶುಲ್ಕವನ್ನು ಪ್ರವೇಶ ಪಡೆಯುವ ಸಂದರ್ಭದಲ್ಲಿ ಪಾವತಿಸಬೇಕು. ಸಂಬಂಧಿಸಿದ ಇಲಾಖೆಗಳಿಗೆ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಿ, ನಿಗದಿಪಡಿಸಿದ ಎಲ್ಲಾ ಶುಲ್ಕಗಳ ಮೊತ್ತ ಮಂಜೂರಾಗಿ ಹಣ ಬಿಡುಗಡೆಯಾದ ನಂತರ, (ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶುಲ್ಕ ಸೇರಿದಂತೆ) ಆ ವಿದ್ಯಾರ್ಥಿಗಳ ಶುಲ್ಕವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಿಕೊಳ್ಳಲಾಗುವುದು. ವಿಶ್ವವಿದ್ಯಾನಿಲಯ ಮತ್ತು ಕಾಲೇಜಿಗೆ ಸಂದಾಯವಾದ ನಂತರ ಹೆಚ್ಚುವರಿ ಮೊತ್ತವನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲಾಗುವುದು. ವಿದ್ಯಾರ್ಥಿವೇತನ ಮಂಜೂರಾಗದಿದ್ದಲ್ಲಿ ವಿದ್ಯಾರ್ಥಿಗಳು ಉಳಿದ ಎಲ್ಲಾ ಶುಲ್ಕಗಳನ್ನು ಪಾವತಿಸಬೇಕು.

## ಶಿಸ್ತುಪಾಲನೆಗೆ ಆದ್ಯತೆ

ಶಿಸ್ತು ವಿದ್ಯಾರ್ಥಿ ಜೀವನದ ಅವಿಭಾಜ್ಯ ಅಂಗ. ಶಿಸ್ತುಬದ್ಧ ಅಧ್ಯಯನ ಭದ್ರ ಭವಿಷ್ಯದ ಬುನಾದಿಯೆಂದು ಮನಗಂಡಿರುವ ವಿಶ್ವವಿದ್ಯಾನಿಲಯ ಕಲಾ ಕಾಲೇಜು ಶಿಸ್ತುಪಾಲನೆಗೆ ಮೊದಲ ಆದ್ಯತೆ ನೀಡುತ್ತದೆ. ಕಾಲೇಜಿನಲ್ಲಿ ಅಶಿಸ್ತಿನಿಂದ ವರ್ತಿಸಿ ಅಶಾಂತಿಗೆ ಕಾರಣರಾಗುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳಲ್ಲಿ ಶಿಸ್ತಿನ ಮನೋಭಾವವನ್ನು ಬೆಳೆಸಲು, ಅಶಿಸ್ತನ್ನು ನಿಯಂತ್ರಿಸಲು ವಿಭಾಗಗಳ ಮುಖ್ಯಸ್ಥರು ಹಾಗೂ ಹಿರಿಯ ಅಧ್ಯಾಪಕರನ್ನು ಒಳಗೊಂಡ ಶಿಸ್ತುಪಾಲನಾ ಸಮಿತಿಯಿದೆ. ಕಾಲೇಜಿನಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದ್ದು ವಿದ್ಯಾರ್ಥಿಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

## ರ್‍ಯಾಗಿಂಗ್ ಮುಕ್ತ ಕ್ಯಾಂಪಸ್

ನಮ್ಮ ಕಾಲೇಜು ರ್‍ಯಾಗಿಂಗ್‌ನಿಂದ ಮುಕ್ತವಾಗಿದೆ ಎಂಬುದು ಹೆಮ್ಮೆಯ ವಿಷಯ. ಆದಾಗ್ಯೂ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ಕಾಲೇಜಿನಲ್ಲಿ ಯುಜಿಸಿ ನಿರ್ದೇಶನದಂತೆ ಹಿರಿಯ ಅಧ್ಯಾಪಕರ ನೇತೃತ್ವದ ರ್‍ಯಾಗಿಂಗ್ ನಿರ್ಬಂಧಕ ಘಟಕವನ್ನು ಸ್ಥಾಪಿಸಲಾಗಿದ್ದು, ಕಾಲೇಜು ಆವರಣದಲ್ಲಿ ಎಲ್ಲಾ ಕಡೆಯೂ ರ್‍ಯಾಗಿಂಗ್ ಚಟುವಟಿಕೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ರೀತ್ಯ, ರ್‍ಯಾಗಿಂಗ್ ಒಂದು ಕ್ರಿಮಿನಲ್ ಅಪರಾಧವಾಗಿರುತ್ತದೆ. ಕರ್ನಾಟಕ ಶಿಕ್ಷಣ ಕಾಯಿದೆ 1983 ರ 116 ನೇ ಪ್ರಕರಣದ ಪ್ರಕಾರವೂ ರ್‍ಯಾಗಿಂಗ್ ಅಪರಾಧವಾಗಿರುತ್ತದೆ. ಈ ಸಂಸ್ಥೆಯು ಎಲ್ಲಾ ಘಟಕಗಳಲ್ಲಿ (ಶೈಕ್ಷಣಿಕ, ವಸತಿಗೃಹ, ಕ್ರೀಡಾ ಚಟುವಟಿಕೆ, ಉಪಾಹಾರ ಗೃಹ, ಮಾಹಿತಿ ಕೇಂದ್ರ ಮೊದಲಾದ ಕಡೆ), ರ್‍ಯಾಗಿಂಗ್ ನಿಷೇಧಿಸಿದೆ. ಸಂಸ್ಥೆಯ ಆವರಣದಲ್ಲಿ ಹಾಗೂ ವಿದ್ಯಾರ್ಥಿಗಳು ಬಳಸುವ ಸಾರ್ವಜನಿಕ ಹಾಗೂ ಖಾಸಗಿ ಸಾರಿಗೆ ವ್ಯವಸ್ಥೆಯಲ್ಲಿಯೂ ರ್‍ಯಾಗಿಂಗ್ ನಿಷೇಧಿಸಲ್ಪಟ್ಟಿದೆ. ರ್‍ಯಾಗಿಂಗ್‌ನಲ್ಲಿ ಭಾಗಿಯಾಗಿರುವ ಹಾಗೂ ಅದನ್ನು ಪ್ರೋತ್ಸಾಹಿಸುವ ವ್ಯಕ್ತಿಗಳ ವಿರುದ್ಧ ಬಾಧೆಗೊಳಗಾದ ವ್ಯಕ್ತಿಗಳು ದಾಖಲಿಸುವ ಲಿಖಿತ ದೂರಿನ ಅನ್ವಯವಾಗಲಿ ಅಥವಾ ಸಂಸ್ಥೆಯು ರಚಿಸಿರುವ ರ್‍ಯಾಗಿಂಗ್ ವಿರೋಧಿ ಪಡೆಯು ನಡೆಸುವ ತಪಾಸಣೆಯ ಅನ್ವಯವಾಗಲಿ ಶಿಸ್ತುಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಈ ಸಂಸ್ಥೆಯು

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಅನ್ನು ನಿರ್ಬಂಧಿಸುವ ಯು.ಜಿ.ಸಿ ನಿಯಮಾವಳಿ 2009ಕ್ಕೆ ಬದ್ಧವಾಗಿರುತ್ತದೆ.

## ತರಗತಿಗಳಲ್ಲಿ ಹಾಜರಾತಿ

ವಿಶ್ವವಿದ್ಯಾನಿಲಯ ನಿಗದಿಪಡಿಸಿರುವಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಎಲ್ಲ ವಿಷಯಗಳ ತರಗತಿಗಳಲ್ಲೂ 75% ಹಾಜರಾತಿ ಹೊಂದಿರುವುದು ಕಡ್ಡಾಯವಾಗಿರುತ್ತದೆ. ಈ ಹಾಜರಾತಿ ಪ್ರಮಾಣವನ್ನು ಹೊಂದಿರದ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ತರಗತಿಗೆ ಹಾಜರಾಗಿ ಶ್ರದ್ಧೆಯಿಂದ ಅಧ್ಯಯನದಲ್ಲಿ ತೊಡಗಿಕೊಳ್ಳಲು ಸೂಚಿಸಿದೆ. ವಿದ್ಯಾರ್ಥಿಗಳ ಹಾಜರಾತಿಯ ಮೇಲೆ ನಿಗಾ ಇಡಲು ಹಾಜರಾತಿ ಸಮಿತಿಯು ಕಾರ್ಯನಿರ್ವಹಿಸುತ್ತದೆ.

## ವಿದ್ಯಾರ್ಥಿ ವೇತನಗಳು

ಕಾಲೇಜಿನಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಈ ಕೆಳಕಂಡ ವಿವಿಧ ವಿದ್ಯಾರ್ಥಿ ವೇತನಗಳ ಅವಕಾಶವಿದೆ.

1. ವಿದ್ಯಾರ್ಥಿವೇತನಕ್ಕಾಗಿ ಈ ವರ್ಷ ಎಲ್ಲಾ ವಿದ್ಯಾರ್ಥಿಗಳು ಎಸ್.ಎಸ್,ಪಿ ಅಡಿಯಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯ
2. ಭಾಷಾ ವಿಷಯಗಳಿಗೆ ನೀಡುವ ಭಾರತ ಸರ್ಕಾರದ ಪ್ರತಿಭಾ ವಿದ್ಯಾರ್ಥಿ ವೇತನ.
3. ಭಾರತ ಸರ್ಕಾರದ ಪರಿಶಿಷ್ಟ ಜಾತಿ ವಿದ್ಯಾರ್ಥಿ ವೇತನ.
4. ಕರ್ನಾಟಕ ಸರ್ಕಾರದ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವೇತನ.
5. ಬೀಡಿ ಕಾರ್ಮಿಕರ ವಿದ್ಯಾರ್ಥಿ ವೇತನ.
6. ಸಂಚಿ ಹೊನ್ನಮ್ಮ ನೆನಪಿನ ವಿದ್ಯಾರ್ಥಿ ವೇತನ.
7. ಹಿಂದುಳಿದ ಮತ್ತು ಅಲ್ಪಸಂಖ್ಯಾತ ಇಲಾಖೆಯ ವಿದ್ಯಾರ್ಥಿ ವೇತನ.
8. ಮಾಜಿ ಸೈನಿಕರ ಅವಲಂಬಿತರ ವಿದ್ಯಾರ್ಥಿ ವೇತನ.
9. ವಿವಿಧ ಸಮುದಾಯ, ಟ್ರಸ್ಟ್‌ಗಳು ನೀಡುವ ವಿದ್ಯಾರ್ಥಿ ವೇತನ.
10. ಸೀತಾರಾಂ ಜಿಂದಾಲ್ ಪ್ರತಿಷ್ಠಾನದ ವಿದ್ಯಾರ್ಥಿ ವೇತನ.
11. ಎನ್‌ಸಿಸಿ ವಿದ್ಯಾರ್ಥಿಗಳಿಗೆ ಸಹರಾ ಮತ್ತು ಕೆಡೆಟ್ ವೆಲ್ ಫೇರ್ ಸೊಸೈಟಿ ವಿದ್ಯಾರ್ಥಿ ವೇತನ.
12. ತುಮಕೂರು ಮಹಾನಗರ ಪಾಲಿಕೆ ಪ್ರೋತ್ಸಾಹಧನ (ಪ.ಜಾ./ಪ.ಪಂ. ವಿದ್ಯಾರ್ಥಿಗಳಿಗೆ)
13. ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ.
14. ಎಂ.ಎಚ್.ಆರ್.ಡಿ. ವಿದ್ಯಾರ್ಥಿ ವೇತನ.
15. ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನ.
16. ಮುಸ್ಲಿಂ ವಿದ್ಯಾರ್ಥಿಗಳಿಗೆ ವಕ್ಫ್ ಹಾಗೂ ದರ್ಗಾ ವಿದ್ಯಾರ್ಥಿ ವೇತನ.
17. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ಕೆಎಂಡಿಸಿ)ದ ಸಾಲ ಸೌಲಭ್ಯ.
18. ಕರ್ನಾಟಕ ಸರ್ಕಾರದ ವಿದ್ಯಾಸಿರಿ ವಿದ್ಯಾರ್ಥಿ ವೇತನ.
19. ಇತರೆ ವಿದ್ಯಾರ್ಥಿ ವೇತನಗಳು.

ಇವುಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕಾಲೇಜಿನ ಕಛೇರಿಯಲ್ಲಿ ಪಡೆಯಬಹುದು. ಕಾಲೇಜಿನ ಸೂಚನಾ ಫಲಕದಲ್ಲಿ ಆಗಿಂದಾಗ್ಗೆ ಪ್ರಕಟಿಸಲಾಗುವ ಮಾಹಿತಿಯನ್ನು ವಿದ್ಯಾರ್ಥಿಗಳು ಗಮನಿಸಿ ಅವಶ್ಯವಿದ್ದಲ್ಲಿ ಹೆಚ್ಚಿನ ಮಾಹಿತಿ ಪಡೆದುಕೊಂಡು ಸೂಕ್ತ ಸಮಯದಲ್ಲಿ ಅರ್ಜಿ ಸಲ್ಲಿಸಿ ಈ ವಿದ್ಯಾರ್ಥಿವೇತನಗಳ ಪ್ರಯೋಜನ ಪಡೆದುಕೊಳ್ಳಬಹುದು.

## ಕಾಲೇಜಿನ ಮೂಲಭೂತ ಸೌಕರ್ಯಗಳು

- ಸುಸಜ್ಜಿತ ತರಗತಿ ಕೊಠಡಿಗಳು
- ಬೋಧನಾ ಕೊಠಡಿಗಳಲ್ಲಿ ಸ್ಮಾರ್ಟ್ ಬೋರ್ಡ್ ವ್ಯವಸ್ಥೆ
- ಬೋಧನಾ ಉಪಕರಣಗಳ ವ್ಯವಸ್ಥೆ
- ಸುಸಜ್ಜಿತ ಗ್ರಂಥಾಲಯ
- ವಿಶಾಲ ಕ್ರೀಡಾಂಗಣದ ವ್ಯವಸ್ಥೆ
- ಆಸ್ಪತ್ರೆ, ಅಂಚೆಕಛೇರಿ,
- ಪೋಲೀಸ್ ಹೊರಠಾಣೆ (ಸದ್ಯದಲ್ಲಿಯೇ ಪ್ರಾರಂಭವಾಗಲಿದೆ)
- ವೈಫೈ ಸೌಲಭ್ಯ
- ಉತ್ತಮ ಗುಣಮಟ್ಟದ ಹಸಿರು ಕಾಲೇಜು ಕ್ಯಾಂಪಸ್
- ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ
- ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯದ ವ್ಯವಸ್ಥೆ

## ಕಂಪ್ಯೂಟರ್ ಲ್ಯಾಬ್

ಜಾಗತಿಕವಾದ ಸವಾಲುಗಳನ್ನು ಎದುರಿಸಲು, ವಿದ್ಯಾರ್ಥಿಗಳನ್ನು ಸನ್ನದ್ಧಗೊಳಿಸುವಲ್ಲಿ ಕಂಪ್ಯೂಟರ್ ಶಿಕ್ಷಣ ಅತ್ಯಂತ ಪ್ರಮುಖವಾದಂತಹ ಪಾತ್ರವನ್ನು ನಿರ್ವಹಿಸುತ್ತಿದ್ದು, ಅತ್ಯುತ್ತಮ ಗುಣಮಟ್ಟದ ಕಂಪ್ಯೂಟರ್ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುವ ಉದ್ದೇಶದಿಂದ ಕಾಲೇಜಿನಲ್ಲಿ ಅತ್ಯಂತ ಸುಸಜ್ಜಿತವಾದಂತಹ ಕಂಪ್ಯೂಟರ್ ಪ್ರಯೋಗಾಲಯವನ್ನು ರೂಪಿಸಲಾಗಿದ್ದು ಕಂಪ್ಯೂಟರ್ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ವಿದ್ಯಾರ್ಥಿಗಳ ಕ್ಷಮತೆಯನ್ನು ವೃದ್ಧಿಸುವ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯನ್ನು ಸಮರ್ಥವಾಗಿ ಬಳಸಲು ಸ್ಪೋಕನ್ ಇಂಗ್ಲಿಷ್ ಕೋರ್ಸ್ ಪ್ರಾರಂಭಿಸಲಾಗುವುದು.

## ಕಾಲೇಜು ಗ್ರಂಥಾಲಯ

ಅಪೂರ್ವ ಪುಸ್ತಕ ಹಾಗೂ ನಿಯತಕಾಲಿಕಗಳ ಸಂಗ್ರಹವಿರುವ ನಮ್ಮ ಕಾಲೇಜಿನ ಗ್ರಂಥಾಲಯವು ಒಂದು ವಿಶಿಷ್ಟ ಜ್ಞಾನನಿಧಿಯಾಗಿದೆ. ಪರಾಮರ್ಶನ ಗ್ರಂಥಗಳು, ಪಠ್ಯಪುಸ್ತಕಗಳು ಸೇರಿದಂತೆ ಗ್ರಂಥಾಲಯದಲ್ಲಿ ಒಟ್ಟು ೩೦,೦೦೦ಕ್ಕಿಂತಲೂ ಹೆಚ್ಚು ಅಮೂಲ್ಯ ಪುಸ್ತಕಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲಕರ ಕೃತಿಗಳು, ಸಂಶೋಧನ ನಿಯತಕಾಲಿಕಗಳು, ಕಂಪ್ಯೂಟರ್ ಕೇಂದ್ರ, ಇಂಟರ್‌ನೆಟ್ ಸೌಲಭ್ಯ ನಮ್ಮ ಗ್ರಂಥಾಲಯದ ವಿಶೇಷತೆಗಳು.

ಗ್ರಂಥಾಲಯವು ರಜಾ ದಿನಗಳನ್ನು ಹೊರತುಪಡಿಸಿ ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10.00 ರಿಂದ ಸಂಜೆ 5.10 ರವರೆಗೆ, ಶನಿವಾರಗಳಂದು ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ

ತೆರೆದಿರುತ್ತದೆ ಹಾಗೂ ವಿದ್ಯಾರ್ಥಿಗಳು ಗ್ರಂಥಾಲಯದ ನಿಯಮಗಳ ಪ್ರಕಾರ ಪುಸ್ತಕಗಳನ್ನು ಎರವಲು ಪಡೆದು ನಿಗದಿತ ಅವಧಿಯಲ್ಲಿ ಹಿಂದಿರುಗಿಸಬೇಕು. ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಶೇಷ ಗ್ರಂಥನಿಧಿಯಿಂದ ಪುಸ್ತಕಗಳನ್ನು ಒದಗಿಸಲಾಗುವುದು. ವಿಭಾಗ ಮುಖ್ಯಸ್ಥರುಗಳ ಸಲಹೆಯ ಮೇರೆಗೆ ಪ್ರತಿ ವರ್ಷ ಹೊಸ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಸೇರಿಸಲಾಗುತ್ತಿದೆ. ಪರಾಮರ್ಶನ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಅಧ್ಯಯನ ಮತ್ತು ಮಾಹಿತಿ ಪಡೆಯುವ ಅವಕಾಶವಿರುತ್ತದೆ.

## ಪಠ್ಯಪೂರಕ ಚಟುವಟಿಕೆಗಳು

ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನವೇ ಶಿಕ್ಷಣದ ಉದ್ದೇಶ ಎಂಬುದನ್ನು ಮನಗಂಡಿರುವ ಕಾಲೇಜು, ಎನ್.ಎಸ್.ಎಸ್., ಎನ್.ಸಿ.ಸಿ., ರೆಡ್‌ಕ್ರಾಸ್, ಸ್ಕೌಟ್ಸ್ & ಗೈಡ್ಸ್, ಕ್ರೀಡೆ, ಸಾಂಸ್ಕೃತಿಕ ಸಮಿತಿ ಮತ್ತಿತರ ವೇದಿಕೆಗಳ ಮೂಲಕ ವಿದ್ಯಾರ್ಥಿಗಳಿಗಾಗಿ ವರ್ಷದುದ್ದಕ್ಕೂ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. ವಿವಿಧ ವೇದಿಕೆ/ಸಮಿತಿಗಳ ಉಸ್ತುವಾರಿಯನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ತಂಡ ನಿರ್ವಹಿಸುತ್ತದೆ.

## ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್)

ಕಾಲೇಜಿನಲ್ಲಿ ಪ್ರಸ್ತುತ ಎರಡು ರಾಷ್ಟ್ರೀಯ ಸೇವಾ ಯೋಜನಾ ಘಟಕಗಳಿದ್ದು, ಪ್ರತಿ ಘಟಕದಲ್ಲಿಯೂ 100 ಮಂದಿ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಲು ಅವಕಾಶವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಸೇವಾಮನೋಭಾವನೆಯನ್ನು ಪ್ರೇರೇಪಿಸಿ ಅವರ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ನೆರವಾಗಲು ಎನ್‌ಎಸ್‌ಎಸ್ ಶ್ರಮಿಸುತ್ತದೆ. ಪ್ರತಿ ಘಟಕದ ವತಿಯಿಂದಲೂ ವಾರಾಂತ್ಯ ಶಿಬಿರಗಳು, ಉಪನ್ಯಾಸಗಳು, ಶ್ರಮದಾನ ಹಾಗೂ ಒಂದು ವಾರದ ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗುತ್ತದೆ. ವಾರಾಂತ್ಯ ಶಿಬಿರಗಳು, ವಿಶೇಷ ಉಪನ್ಯಾಸಗಳು, ರಕ್ತದಾನ ಶಿಬಿರ, ಆರೋಗ್ಯದ ಕುರಿತು ಅರಿವು, ಸ್ವಚ್ಛತಾ ಆಂದೋಲನಗಳಿಂದ ಎನ್‌ಎಸ್‌ಎಸ್ ಕ್ರಿಯಾಶೀಲವಾಗಿದೆ.

## ಎನ್‌ಸಿಸಿ

ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾಗುಣ ಹಾಗೂ ದೇಶಪ್ರೇಮವನ್ನು ಮೂಡಿಸುವ ಸಲುವಾಗಿ ಕಾಲೇಜಿನಲ್ಲಿ ಎನ್‌ಸಿಸಿ ಘಟಕವಿದ್ದು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿ ಒಟ್ಟು 108 ಕೆಡೆಟ್‌ಗಳಿಗೆ ಪ್ರವೇಶಾವಕಾಶವಿದೆ. ನಮ್ಮ ಕಾಲೇಜಿನ ಘಟಕವು 4ನೇ ಕರ್ನಾಟಕ ಬೆಟಾಲಿಯನ್‌ನ ಆರ್ಮಿ ಇನ್‌ಫ್ಯಾಂಟ್ರಿ ಶಾಖೆಗೆ ಸಂಯೋಜನೆಗೊಂಡಿದೆ. ರಾಷ್ಟ್ರೀಯ ಏಕತಾ ಶಿಬಿರ, ನಾಯಕತ್ವ ಶಿಬಿರ, ಪರ್ವತಾರೋಹಣ ಸಾಹಸ ಶಿಬಿರ ಹಾಗೂ ಆರ್ಮಿ ಅಟ್ಯಾಚ್‌ಮೆಂಟ್ ಕ್ಯಾಂಪ್‌ಗಳಲ್ಲಿ ನಮ್ಮ ಸಮರ್ಥ ಕೆಡೆಟ್‌ಗಳು ಭಾಗವಹಿಸಿ ರಾಜ್ಯ, ರಾಷ್ಟ್ರಮಟ್ಟಗಳಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡು ಬರುತ್ತಿದ್ದಾರೆ. ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎನ್‌ಸಿಸಿ ತಂಡವು ತನ್ನ ಸಮಾಜಮುಖಿ ಕರ್ತವ್ಯಗಳನ್ನು ನಿರ್ವಹಿಸುತ್ತಾ ಬಂದಿದೆ.

## ರೆಡ್‌ಕ್ರಾಸ್ /ಸ್ಕೌಟ್ಸ್ & ಗೈಡ್ಸ್

ಯುವಜನರಲ್ಲಿ ಸೇವಾ ಮನೋಭಾವ ಹಾಗೂ ಸಮುದಾಯ ಚಿಂತನೆಯನ್ನು ಬೆಳೆಸುವ ಉದ್ದೇಶದಿಂದ ಕಾಲೇಜಿನಲ್ಲಿ ರೆಡ್‌ಕ್ರಾಸ್ ಹಾಗೂ ಸ್ಕೌಟ್ಸ್ & ಗೈಡ್ಸ್ ಘಟಕಗಳಿದ್ದು, ರಕ್ತದಾನ, ರಕ್ತದ ಗುಂಪಿನ ವರ್ಗೀಕರಣ, ಸ್ವಚ್ಛತೆ, ಸೇವಾ ಮನೋಭಾವ ಬೆಳೆಸುವಂತಹ ಅನೇಕ ಚಟುವಟಿಕೆಗಳನ್ನು ಈ ಘಟಕಗಳು ನಡೆಸುತ್ತಾ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಾಳಜಿ ಪೋಷಿಸುವ ಕೆಲಸವನ್ನು ಮಾಡುತ್ತಾ ಬಂದಿವೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯೊಂದಿಗೆ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದೆ.

## ಸಾಂಸ್ಕೃತಿಕ ವೇದಿಕೆ

ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಹೊರಗೆಡಹಲು/ಪೋಷಿಸಲು ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಲಾಗಿದೆ. ಅಧ್ಯಾಪಕರೊಬ್ಬರು ಇದರ ಸಂಚಾಲಕತ್ವ ಹೊಂದಲಿದ್ದು, ಇತರೆ ಸದಸ್ಯರ ಮಾರ್ಗದರ್ಶನದಲ್ಲಿ ವರ್ಷದುದ್ದಕ್ಕೂ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಅಲ್ಲದೆ, ವಿಶ್ವವಿದ್ಯಾನಿಲಯ ಹಾಗೂ ರಾಜ್ಯ/ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಉತ್ಸುಕ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಕಳುಹಿಸುವ ವ್ಯವಸ್ಥೆ ಇದೆ. ಪ್ರತಿ ವರ್ಷ **"ಮಾನವಿಕ"** ವೇದಿಕೆಯಡಿಯಲ್ಲಿ ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗುತ್ತಿದೆ.

ಕಳೆದ ಶೈಕ್ಷಣಿಕ ಸಾಲುಗಳಲ್ಲಿ ನಮ್ಮ ಕಾಲೇಜಿನ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳು ಭಾಷಣ, ಚರ್ಚೆ, ಗಾಯನ, ಪ್ರಬಂಧ, ಮಿಮಿಕ್ರಿ, ನೃತ್ಯ, ಜನಪದ ಕಲೆ, ರಸಪ್ರಶ್ನೆ, ದೃಶ್ಯಕಲೆ ಮುಂತಾದ ಸ್ಪರ್ಧೆಗಳಲ್ಲಿ ಜಿಲ್ಲೆ ಹಾಗೂ ರಾಜ್ಯ/ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ನಮ್ಮ ಕಾಲೇಜಿನ ಆವರಣದಲ್ಲಿ ಸುಸಜ್ಜಿತವಾದ ಸುಮಾರು 1000 ಆಸನ ವ್ಯವಸ್ಥೆಯುಳ್ಳ ಸಭಾಭವನ ನಿರ್ಮಾಣ ಮಾಡುವ ಯೋಜನೆ ಇದೆ.



ವಿ.ವಿ.ಕಲಾ ಕಾಲೇಜು ಆಯೋಜಿಸಿದ "ಮಾನವಿಕ" ಅಂತರ ಕಾಲೇಜು
ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ




ವಿ.ವಿ ಕಲಾ ಕಾಲೇಜಿನ "ಕಲಾಸಿರಿ" ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ
ಮಾಡಿದ ಹಂಪಿ ವಿ.ವಿ. ಯ ಕುಲಪತಿಗಳು ಡಾ. ಸ.ಚಿ.ರಮೇಶ್



**ಬಿ.ಎಫ್.ಎ ವಿದ್ಯಾರ್ಥಿಗಳಿಂದ ವಿಶ್ವ ಶಿಕ್ಷಣ ದಿನದ ಆಚರಣೆ**




**ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ವಿಶೇಷ ಉಪನ್ಯಾಸ ಮತ್ತು ಸಂವಾದ**




**ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆಯ ಸಂಬಂಧ ನಡೆದ ಉಪನ್ಯಾಸ**



ಮಾನವಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ




ಮಹಿಳಾ ಶಿಕ್ಷಣಕ್ಕಾಗಿ ಶ್ರಮಿಸಿದ ಜ್ಯೋತಿ ಬಾ ಪುಲೆ ರವರ ನೆನಪು ಕಾರ್ಯಕ್ರಮ



Inauguration of "Sankalpa" Cultural Programme of Univ.College of Arts




ವಿಶ್ವವಿದ್ಯಾನಿಲಯ ಕಲಾ ಕಾಲೇಜು ನಡೆಸಿದ ರಕ್ತ ದಾನ ಶಿಬಿರದ ಉದ್ಘಾಟನೆ

## ಕ್ರೀಡಾ ಚಟುವಟಿಕೆಗಳು

ಕಾಲೇಜಿನ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ನೇತೃತ್ವದಲ್ಲಿ ವರ್ಷದುದ್ದಕ್ಕೂ ಹಲವಾರು ಕ್ರೀಡಾಚಟುವಟಿಕೆಗಳು ಜರುಗುತ್ತವೆ. ವಿಶಾಲ ಕ್ರೀಡಾಂಗಣ ಕಾಲೇಜಿನ ವೈಶಿಷ್ಟ್ಯಗಳಲ್ಲೊಂದಾಗಿದ್ದು, ವಿದ್ಯಾರ್ಥಿಗಳ ಎಲ್ಲಾ ಬಗೆಯ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಸಕ್ತಿಗಳನ್ನು ಪೋಷಿಸಲಾಗುತ್ತದೆ. ಕಾಲೇಜಿನ ವಿದ್ಯಾರ್ಥಿಗಳು ಈಗಾಗಲೇ ರಾಜ್ಯ/ರಾಷ್ಟ್ರ ಮಟ್ಟಗಳಲ್ಲಿ ಸಾಕಷ್ಟು ಹೆಸರು ಗಳಿಸಿದ್ದಾರೆ. ಸದ್ಯದಲ್ಲಿಯೇ ಜಿಮ್ ಕೇಂದ್ರವನ್ನು ಆರಂಭಿಸುವ ಯೋಜನೆ ಇದೆ.



## ವಿದ್ಯಾರ್ಥಿ ಕ್ಷೇಮಪಾಲನೆ

ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತ ಶೌಚಾಲಯ ಸಮುಚ್ಚಯ ಕಾಲೇಜಿನ ವೈಶಿಷ್ಟ್ಯ. ಆದಾಗ್ಯೂ ವಿದ್ಯಾರ್ಥಿಗಳಿಗುಂಟಾಗಬಹುದಾದ ತೊಂದರೆಗಳನ್ನು ನಿವಾರಿಸಲು ಕಾಲೇಜಿನಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳನ್ನು ನೇಮಿಸಲಾಗಿದೆ. ಅಲ್ಲದೆ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ **ಕುಂದುಕೊರತೆ ನಿವಾರಣಾ ಘಟಕ** ವನ್ನು ಸ್ಥಾಪಿಸಲಾಗಿದೆ. ಕಾಲೇಜಿನಲ್ಲಿ ದೂರು/ಸಲಹಾ ಪೆಟ್ಟಿಗೆಗಳನ್ನು ಇಡಲಾಗಿದ್ದು, ವಿದ್ಯಾರ್ಥಿಗಳು ತಮಗಾಗುತ್ತಿರುವ ತೊಂದರೆಗಳನ್ನು ಬರೆದು ಪೆಟ್ಟಿಗೆಗಳಿಗೆ ಹಾಕಬಹುದಾಗಿದೆ. ಪ್ರಾಂಶುಪಾಲರ ಉಪಸ್ಥಿತಿಯಲ್ಲಿ ನಿಯಮಿತವಾಗಿ ಸಲಹಾಪೆಟ್ಟಿಗೆಯನ್ನು ತೆರೆದು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

## ಆಪ್ತಸಮಾಲೋಚನೆ

ಒತ್ತಡಗಳ ನಡುವೆ ಬದುಕುತ್ತಿರುವ ಯುವಪೀಳಿಗೆಯ ಹಿತರಕ್ಷಣೆಯನ್ನು ಗಮನದಲ್ಲಿರಿಸಿಕೊಂಡು ಕಾಲೇಜಿನಲ್ಲಿ ಒಂದು ಆಪ್ತಸಮಾಲೋಚನಾ ಘಟಕವಿದ್ದು, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಅಧ್ಯಾಪಕರುಗಳನ್ನು ಆಪ್ತಸಮಾಲೋಚಕರನ್ನಾಗಿ ನೇಮಿಸಲಾಗಿದೆ. ಅಗತ್ಯವೆನಿಸಿದಾಗ ವಿದ್ಯಾರ್ಥಿಗಳು ನಿಸ್ಸಂಕೋಚವಾಗಿ ಸಂಬಂಧಪಟ್ಟ ಆಪ್ತಸಮಾಲೋಚಕರನ್ನು ಭೇಟಿಯಾಗಿ ಸಲಹೆ ಪಡೆದುಕೊಳ್ಳಬಹುದು.

### ಮಹಿಳಾ ದೌರ್ಜನ್ಯ ನಿರ್ಬಂಧ ಘಟಕ

ವಿದ್ಯಾರ್ಥಿನಿಯರ ಯೋಗಕ್ಷೇಮವನ್ನು ನೋಡಿಕೊಳ್ಳುವ ಉದ್ದೇಶದಿಂದ ಕಾಲೇಜಿನಲ್ಲಿ ಮಹಿಳಾ ದೌರ್ಜನ್ಯ ನಿರ್ಬಂಧ ಘಟಕವನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿನಿಯರು ತಮಗೇನಾದರೂ ಅನಾನುಕೂಲಗಳುಂಟಾದಲ್ಲಿ ತಕ್ಷಣ ಪ್ರಾಂಶುಪಾಲರನ್ನು ಅಥವಾ ಘಟಕದ ಸಂಚಾಲಕರನ್ನು ಖುದ್ದು ಭೇಟಿಯಾಗಿ ದೂರು ನೀಡಬಹುದಾಗಿದೆ. ಅಧ್ಯಾಪಕಿಯರು ಹಾಗೂ ವಿದ್ಯಾರ್ಥಿನಿಯರಿಗಾಗಿ ಕಾಲೇಜಿನಲ್ಲಿ ವಿಶ್ರಾಂತಿ ಕೊಠಡಿಗಳ ಸೌಲಭ್ಯವಿದೆ.



### ಉದ್ಯೋಗ ಮಾರ್ಗದರ್ಶನ ಘಟಕ

ಕಾಲೇಜಿನಲ್ಲಿರುವ ಉದ್ಯೋಗ ಮಾರ್ಗದರ್ಶನ ಘಟಕವು ವಿದ್ಯಾರ್ಥಿಗಳು ವಿವಿಧ ಉದ್ಯೋಗಗಳ ಬಗ್ಗೆ ಮಾಹಿತಿ ಮತ್ತು ತರಬೇತಿ ಪಡೆದುಕೊಳ್ಳಲು ನೆರವಾಗುತ್ತದೆ. ಆಗಿಂದಾಗ್ಗೆ ವ್ಯಕ್ತಿತ್ವ ವಿಕಸನ ಶಿಬಿರಗಳು, ಸಂದರ್ಶನ ತರಬೇತಿ, ಪ್ರವೇಶ ಪರೀಕ್ಷಾ ತರಬೇತಿ, ಸ್ಪೋಕನ್ ಇಂಗ್ಲೀಷ್ ಕೋರ್ಸ್, ಐಎಎಸ್, ಕೆಎಎಸ್ ಕೋಚಿಂಗ್ ಕ್ಲಾಸ್, ಕ್ಯಾಂಪಸ್ ನೇಮಕಾತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. ಕಾಲೇಜಿನ ಹಲವಾರು ಹಿರಿಯ ವಿದ್ಯಾರ್ಥಿಗಳು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

### ವಿದ್ಯಾರ್ಥಿ ನಿಲಯ ಸೌಕರ್ಯ

1. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ **ಶುಲ್ಕ ಸಹಿತ** ವಸತಿ ನಿಲಯದ (Paying Hostel) ಸೌಕರ್ಯ ಇರುತ್ತದೆ.
2. ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಸತಿ ನಿಲಯದ ಸೌಕರ್ಯ ಹಾಗೂ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರಿತ ಹಾಸ್ಟೆಲ್ ಸೌಕರ್ಯವಿರುತ್ತದೆ.

## ಯುಜಿಸಿ ವ್ಯವಹಾರಗಳ ಘಟಕ

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯುಜಿಸಿ) ದಿಂದ ಕಾಲೇಜು ಸಾಕಷ್ಟು ಯೋಜನೆಗಳನ್ನು ಪಡೆದುಕೊಳ್ಳುತ್ತಿದ್ದು ಅವುಗಳ ಸೂಕ್ತ ನಿರ್ವಹಣೆಗಾಗಿ ಯುಜಿಸಿ ವ್ಯವಹಾರಗಳ ಘಟಕವನ್ನು ಸ್ಥಾಪಿಸಲಾಗಿದೆ. ಕಾಲೇಜಿನ ಭೌತಿಕ ಹಾಗೂ ಬೌದ್ಧಿಕ ಅಭಿವೃದ್ಧಿಗೆ ಪೂರಕವಾಗಿ ಈ ಘಟಕವು ಕಾರ್ಯನಿರ್ವಹಿಸುತ್ತದೆ. ಯುಜಿಸಿಯಿಂದ ಹಲವಾರು ಯೋಜನೆಗಳು ಮಂಜೂರಾಗಿದ್ದು ಅವುಗಳ ಸದ್ಬಳಕೆಗೆ ಘಟಕವು ಶ್ರಮಿಸುತ್ತಿದೆ.

## ಆಂತರಿಕ ಗುಣಮಟ್ಟ ಭರವಸೆ ಘಟಕ (IQAC)

ಕಾಲೇಜಿನ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಗುಣಮಟ್ಟವನ್ನು ಉಳಿಸಿ ಬೆಳೆಸಲು ಆಂತರಿಕ ಗುಣಮಟ್ಟ ಭರವಸೆ ಘಟಕವನ್ನು ಸ್ಥಾಪಿಸಲಾಗಿದೆ. ಇದು ಕಾಲೇಜಿನ ಇಡೀ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಯೋಜನೆ ಹಾಗೂ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿವಿಧ ವಿಭಾಗಗಳು ಹಾಗೂ ವೇದಿಕೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಪ್ರೇರೇಪಿಸುವುದಲ್ಲದೆ, ಅವುಗಳ ದಾಖಲೀಕರಣವನ್ನೂ ನಡೆಸುತ್ತದೆ.




ವಿಶ್ವವಿದ್ಯಾನಿಲಯ
ಕಲಾ ಕಾಲೇಜು, ತುಮಕೂರು
ವಿಭಾಗಗಳ


TUMKUR UNIVERSITY
ಕ್ಯಾಂಪಸ್ ಸುದ್ದಿ
ಕ್ಯಾಂಪಸ್ ಸುದ್ದಿ
Prof.Siddegowda Y S


TUMKUR UNIVERSITY
ರಾಷ್ಟ್ರೀಯ ಸೇವಾ ಯೋಜನೆ
Tumkur University
26 JUNE
"International Day Against Drug Abuse and Illicit Trafficking"

ಪ್ರಜಾವಾಣಿ



# ಸ್ವರ್ಣಪದಕ ವಿಜೇತ ವಿದ್ಯಾರ್ಥಿನಿಗೆ ಸನ್ಮಾನ



ತುಮಕೂರು: ತುಮಕೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿಶ್ವವಿದ್ಯಾನಿಲಯ ಕಲಾ ಕಾಲೇಜು ವಿದ್ಯಾರ್ಥಿನಿ ಟಿ.ಎಸ್.ಪುಷ್ಪಲತಾ ಅವರನ್ನು ಹಾಲಪ್ಪ ಪ್ರತಿಷ್ಠಾನದಿಂದ ಮಂಗಳವಾರ ಸನ್ಮಾನಿಸಲಾಯಿತು.

ಪ್ರತಿಷ್ಠಾನದ ಮುಖ್ಯಸ್ಥ ಮುರಳೀಧರ ಹಾಲಪ್ಪ ಮಾತನಾಡಿ, ಕನ್ನಡ ಮಾಧ್ಯಮದಲ್ಲಿ ಓದಿದ ಅನೇಕರು ಸಮಾಜದ ಉನ್ನತ ಸ್ಥಾನಗಳಲ್ಲಿ ಇದ್ದಾರೆ. ರಾಷ್ಟ್ರ ಮಟ್ಟದಲ್ಲಿ ಮಾಧ್ಯಮ ವಲಯದಲ್ಲಿ ಗುರುತಿಸಿಕೊಂಡಿರುವ ಅನೇಕರು ಕನ್ನಡ ಮಾಧ್ಯಮದಲ್ಲಿ ಓದಿದವರೇ ಆಗಿದ್ದಾರೆ. ಕನ್ನಡ ಮಾಧ್ಯಮವೆಂಬ ಕೀಳರಿಮೆ ಯಾರಿಗೂ ಬೇಡ ಎಂದರು.

ವಿದ್ಯಾರ್ಥಿಗಳು ಸಾಧನೆ ಮೆಟ್ಟಿಲೇರಿ ತುಮಕೂರು ವಿಶ್ವವಿದ್ಯಾನಿಲಯ ಪ್ರತಿಷ್ಠೆಯನ್ನು ಹೆಚ್ಚಿಸಬೇಕು. ಅದಕ್ಕೆ ಪೂರಕವಾಗಿ ಶಿಕ್ಷಕರೂ ವಿದ್ಯಾರ್ಥಿಗಳ ಸಾಧನೆಗೆ ಕೈ ಜೋಡಿಸಬೇಕು ಎಂದು ಹೇಳಿದರು.

ಕುಲಪತಿ ವೈ.ಎಸ್.ಸಿದ್ದೇಗೌಡ, ವಿಶ್ವವಿದ್ಯಾನಿಲಯದ ಜೊತೆಗೆ ಸಮಾಜವೂ ಸಹಕರಿಸಬೇಕು. ಪ್ರಾದೇಶಿಕ ಬೆಂಬಲ ಸಿಕ್ಕಷ್ಟು ವಿಶ್ವವಿದ್ಯಾನಿಲಯಗಳು ಅಭಿವೃದ್ಧಿ ಹೊಂದುತ್ತವೆ ಎಂದರು.

ಕಲಾ ಕಾಲೇಜು ಪ್ರಾಂಶುಪಾಲ ಕೆ.ರಾಮಚಂದ್ರಪ್ಪ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಸಿಬಂತಿ ಪದ್ಮನಾಭ ಇದ್ದರು.


ಡಾ. ಭಾಗ್ಯಲಕ್ಷ್ಮಿ ಹೀರೇಂದ್ರ ಷಾ
ಪ್ರೊ.ವೈ.ಎಸ್.ಸಿದ್ದೇಗೌಡ
ಡಾ. ವೀರೇಶಾನಂದ ಸರಸ್ವತೀ ಸ್ವಾಮೀಜಿ
ಶ್ರೀ ಶ್ರೀನಿವಾಸ. ಆರ್. ಕೆ.




ಕಲಾಸಿರಿ
2019-20ನೇ ಶೈಕ್ಷಣಿಕ ಸಾಲಿನ ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್,




NSS Annual Special Camp Inaugural Function






ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಎನ್.ಸಿ.ಸಿ.
ಘಟಕಗಳು ಯುವ ರೆಡ್ ಕ್ರಾಸ್ ಘಟಕದ
ಸಹಯೋಗದಲ್ಲಿ ಇಂದು ಹಮ್ಮಿಕೊಂಡ ಕಾರ್ಯಕ್ರಮ.



**Addressed by Prof. Y.S. Siddegowda, Vice Chancellor, Tumkur University, Tumakuru at NSS Annual Special Camp Valedictory Function**







**NCC Cadets of University College of Arts, Tumkur**

## 2019-20 ಸಾಲಿನ ಕಾಲೇಜಿನ ಅಧ್ಯಾಪಕ ವರ್ಗ



ಕಾಲೇಜಿನ ಅಧ್ಯಾಪಕವರ್ಗ

### ಬೋಧಕ ವರ್ಗ

| | | |
|---|---|---|
| ಶ್ರೀ ರಾಮಚಂದ್ರಪ್ಪ ಕೆ. | ಪ್ರಾಂಶುಪಾಲರು | 9916063545 |

**ಕನ್ನಡ ವಿಭಾಗ**

| | | |
|---|---|---|
| ಶ್ರೀ ಕರಿಯಣ್ಣ ಬಿ. | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 6362854252 |
| ಶ್ರೀ ವೆಂಕಟರೆಡ್ಡಿ ರಾಮರೆಡ್ಡಿ | ಸಹಾಯಕ ಪ್ರಾಧ್ಯಾಪಕರು | |
| ಡಾ. ಎಸ್. ಶಿವಣ್ಣ | ಸಹಾಯಕ ಪ್ರಾಧ್ಯಾಪಕರು | |
| ಡಾ. ರೇಣುಕಾ ಎಚ್.ಆರ್. | ಸಹಾಯಕ ಪ್ರಾಧ್ಯಾಪಕರು | |

**ಇಂಗ್ಲಿಷ್ ವಿಭಾಗ**

| | | |
|---|---|---|
| ಶ್ರೀಮತಿ ದಾಕ್ಷಾಯಿಣಿ ಜಿ | ಸಹಾಯಕ ಪ್ರಾಧ್ಯಾಪಕರು | |
| ಡಾ. ರವಿ ಸಿ.ಎಂ. | ಸಹಾಯಕ ಪ್ರಾಧ್ಯಾಪಕರು | |
| ಶ್ರೀ ಮೋಹನ್ ಪ್ರಕಾಶ್ | ಸಹಾಯಕ ಪ್ರಾಧ್ಯಾಪಕರು | |
| ಶ್ರೀ ವೇಣುಗೋಪಾಲ ಬಿ.ಎನ್. | ಸಹಾಯಕ ಪ್ರಾಧ್ಯಾಪಕರು | |
| ಡಾ. ಸುಬ್ರಹ್ಮಣ್ಯ ಶರ್ಮ ವಿ. | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9880828387 |

**ಹಿಂದಿ ವಿಭಾಗ**

| | | |
|---|---|---|
| ಶ್ರೀ ಕೆ. ರಾಮಚಂದ್ರಪ್ಪ | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9916063545 |

**ಇತಿಹಾಸ ವಿಭಾಗ**

| | | |
|---|---|---|
| ಶ್ರೀ ಟಿ.ಎನ್. ಹರಿಪ್ರಸಾದ್ | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9972106625 |

**ಅರ್ಥಶಾಸ್ತ್ರ ವಿಭಾಗ**

| | | |
|---|---|---|
| ಡಾ. ರಮೇಶ್ ಎಸ್. | ಸಹಾಯಕ ಪ್ರಾಧ್ಯಾಪಕರು | |
| ಡಾ. ರಮೇಶ ರೆಡ್ಡಿ ವಿ. | ಸಹಾಯಕ ಪ್ರಾಧ್ಯಾಪಕರು | |
| ಡಾ ಪದ್ಮಿನಿ ಎಸ್.ವಿ. | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 7019282785 |
| ಡಾ. ಉಮೇಶ್ ಎಸ್.ಇ. | ಸಹಾಯಕ ಪ್ರಾಧ್ಯಾಪಕರು | |
| ಡಾ. ಜಾಯ್ ನೆರೆಲ್ಲಾ | ಸಹ ಪ್ರಾಧ್ಯಾಪಕರು (ನಿಯೋಜನೆ) | |

**ರಾಜ್ಯಶಾಸ್ತ್ರ ವಿಭಾಗ**

| | | |
|---|---|---|
| ಡಾ. ಗಿರಿಜಾ ಕೆ.ಎಸ್. | ಸಹಾಯಕ ಪ್ರಾಧ್ಯಾಪಕರು | |
| ಡಾ. ಮೌನೇಶ್ವರ ಶ್ರೀನಿವಾಸರಾವ್ | ಸಹಾಯಕ ಪ್ರಾಧ್ಯಾಪಕರು | |
| ಡಾ. ಶ್ರೀಪಾದ ಕುಲಕರ್ಣಿ | ಸಹಾಯಕ ಪ್ರಾಧ್ಯಾಪಕರು | |
| ಡಾ. ಗುಂಡೇಗೌಡ | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 6361647674 |

**ಸಮಾಜಶಾಸ್ತ್ರ ವಿಭಾಗ**

| | | |
|---|---|---|
| ಡಾ. ಸುನೀತಾ ವಿ. ಗಾಣಿಗೇರ | ಸಹಾಯಕ ಪ್ರಾಧ್ಯಾಪಕರು | |
| ಡಾ. ನಾಗರಾಜ ಎಸ್. | ಸಹಾಯಕ ಪ್ರಾಧ್ಯಾಪಕರು | |
| ಡಾ. ಅಶ್ವಿನಿ | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 7406679311 |

**ಪತ್ರಿಕೋದ್ಯಮ ವಿಭಾಗ**

| | | |
|---|---|---|
| ಶ್ರೀ ಪದ್ಮನಾಭ ಕೆ.ವಿ. | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9449525854 |

**ವಾಣಿಜ್ಯಶಾಸ್ತ್ರ ಹಾಗೂ ನಿರ್ವಹಣಾ ವಿಭಾಗ**

| | | |
|---|---|---|
| ಶ್ರೀ ಚಂದ್ರಮೌಳಿ | ಸಹಾಯಕ ಪ್ರಾಧ್ಯಾಪಕರು | |
| ಶ್ರೀ ನಾಗರಾಜು ಆರ್.ಸಿ. | ಸಹಾಯಕ ಪ್ರಾಧ್ಯಾಪಕರು | |
| ಡಾ. ವನಜಾಕ್ಷಿ ಇ. | ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು | 9353646558 |
| ಡಾ. ಸುರೇಶ್ ಬಿ.ಕೆ. | ಸಹಾಯಕ ಪ್ರಾಧ್ಯಾಪಕರು | |
| ಡಾ. ಸಿ. ಶೋಭಾ | ಸಹಾಯಕ ಪ್ರಾಧ್ಯಾಪಕರು | |
| ಡಾ. ಶ್ರೀನಿವಾಸ ಮೂರ್ತಿ ಎಂ.ಡಿ. | ಸಹಾಯಕ ಪ್ರಾಧ್ಯಾಪಕರು | |
| ಡಾ. ದೇವರಾಜಪ್ಪ ಎಸ್. | ಸಹಾಯಕ ಪ್ರಾಧ್ಯಾಪಕರು | |
| ಶ್ರೀಮತಿ ಸಲ್ಮಾಬಾನು | ಸಹಾಯಕ ಪ್ರಾಧ್ಯಾಪಕರು | |

**ಲಲಿತಕಲಾ ವಿಭಾಗ**

| | | |
|---|---|---|
| ಶ್ರೀ ಕರಿಯಣ್ಣ ಬಿ. | ಮುಖ್ಯಸ್ಥರು | 9448660632 |

**ಕ್ರೀಡಾ ವಿಭಾಗ**

| | | |
|---|---|---|
| ಶ್ರೀ ಸುದೀಪ್ ಕುಮಾರ್ ಆರ್. | ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು | 8904131981 |

**ಗ್ರಂಥಾಲಯ ವಿಭಾಗ**

| | | |
|---|---|---|
| ಡಾ. ಸುಮಾದೇವಿ ಎಸ್. | ಸಹಾಯಕ ಗ್ರಂಥಪಾಲಕರು | 9480849040 |
| ಶ್ರೀಮತಿ ಶೃತಿ ಕೆ. | ಗ್ರಂಥಾಲಯ ಸಹಾಯಕರು ಗ್ರೇಡ್-2 | 9481453454 |

ಬೋಧನಾ ಕಾರ್ಯಭಾರಕ್ಕನುಗುಣವಾಗಿ ಪ್ರತಿಭಾನ್ವಿತ ಅತಿಥಿ ಉಪನ್ಯಾಸಕರ ಸೇವೆಯನ್ನು ಒದಗಿಸಲಾಗುವುದು.

**ಬೋಧಕೇತರ ವರ್ಗ**

| | | |
|---|---|---|
| ಶ್ರೀ ಬಸವರಾಜ ಪಿ.ಎಸ್. | ದ್ವಿತೀಯ ದರ್ಜೆ ಸಹಾಯಕರು | 9845639555 |
| ಶ್ರೀ ಪರಪ್ಪ ಆರ್ | ದ್ವಿತೀಯ ದರ್ಜೆ ಸಹಾಯಕರು | 9742312387 |

**ಸಂಚಿತ ವೇತನ ಸಿಬ್ಬಂದಿ**

| | | |
|---|---|---|
| ಶ್ರೀ ಓಬಳರಾಜು ಪಿ | ಪ್ರವೇಶ ವಿಭಾಗ | 9945676706 |
| ಶ್ರೀಮತಿ ವಾಣಿ ಕೃಷ್ಣಮೂರ್ತಿ ಮೇಲಗಿರಿ | ಪರೀಕ್ಷಾ ವಿಭಾಗ | 7892230145 |
| ಶ್ರೀಮತಿ ಶಕುಂತಲ ಎಂ.ಎ. | ಬೆರಳಚ್ಚು/ಸಾಮಾನ್ಯ | 7996640071 |
| ಶ್ರೀ ಸುರೇಶ್ | ಟಪಾಲು/ಸಾಮಾನ್ಯ | 9036966005 |
| ಶ್ರೀ ರಾಮಪ್ಪ ಸಿ | ಬೆರಳಚ್ಚು/ಸಾಮಾನ್ಯ | 9980831364 |
| ಶ್ರೀ ಷಣ್ಮುಖಸ್ವಾಮಿ ಟಿ.ಪಿ. | ಗ್ರಂಥಾಲಯ | 9481300570 |
| ಶ್ರೀಮತಿ ರಮಾಮಣಿ ಜಿ.ಎನ್. | ಕಛೇರಿ/ಸಾಮಾನ್ಯ | 9148201670 |